ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ
ನ್ಯಾಯಾಧೀಶರ ನ್ಯಾಯಾಲಯ, ಹಾಸನ

ಎಲ್ ಎ ಸಿ ನಂ **434/2023**

ಪಿಡಬ್ಲ್ಯೂ-3- ವೆಂಕಟಯ್ಯ

ದಿನಾಂಕ: **18/03/2026** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ ಅರ್ಜಿದಾರರ ವಕೀಲರಿಂದ:

ನನ್ನ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ.

| | |
|---|---|
| **Ex.C-10** | Payment voucher |
| **Ex.C-11** | Individual Award. |
| **Ex.C-12** | Award Notice |
| **Ex.C-13** | Application u/s 64 of RFCTLARR Act along with condonation application. |

ಪಾಟೀ ಸವಾಲು: ಪ್ರತಿವಾದಿಪರ ಶ್ರೀ ಎಸ್ ಹೆಚ್ ಎಂ ವಕೀಲರಿಂದ:

ಸರ್ವೆ ನಂಬರ್ ಎರಡು ಎಕರೆ ಜಮೀನಿದ್ದು ಅದರಲ್ಲಿ 9 ಗುಂಟೆ ಭೂ ಸ್ವಾಧೀನವಾಗಿರುತ್ತದೆ. ಮಾರುಕಟ್ಟೆ ಬೆಲೆ ನಿಗಧಿ ಮಾಡುವಾಗ ನಮಗೆ ನೋಟೀಸ್ ಕೊಟ್ಟಿರುತ್ತಾರೆ ನಾವು ಬಂದು ನಮ್ಮ ಜಮೀನನ್ನು ನೋಡಿ ಎಂದು ಅವರಿಗೆ ಅರ್ಜಿ ಕೊಟ್ಟಿರುತ್ತೇವೆ ಅವರು ಯಾರು ಬಂದು ನೋಡಿರುವುದಿಲ್ಲ. ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ನಾನು ಯಾವುದೇ ಅರ್ಜಿಯನ್ನು ಹಾಜರುಪಡಿಸಿಲ್ಲ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಒಂದೊಂದು ಹಳ್ಳಿಗೆ ಒಂದೊಂದು ಬೆಲೆ ಇರುತ್ತದೆ ಎಂದರೆ ಸರಿ. ರಸ್ತೆ ಪಕ್ಕ ಇರುವ ಜಮೀನಿಗೆ ದೂರ ಇರುವ ಜಮೀನಿಗೆ ಒಂದೊಂದು ಬೆಲೆ ಇರುತ್ತದೆ ಎಂದರೆ ಸರಿ. ನೀರಾವರಿ ಜಮೀನಿಗೆ ಒಂದು ಭೂಮಿ ಮಳೆ ಆಶ್ರಿತ ಭೂಮಿಗೆ ಒಂದು ಬೆಲೆ ಎಂದರೆ ಸರಿ. ರಸ್ತೆಯಿಂದ ನಮ್ಮ ಜಮೀನಿಗೆ ಹೋಗಬೇಕಾಗುತ್ತದೆ. ಆ ಜಮೀನಿನಿಂದ ಟಾರ್ ರಸ್ತೆಗೆ ಒಂದುವರೆ ಕಿ.ಮೀ. ಟಾರ್ ರಸ್ತೆಯಿಂದ ಹೈವೆಗೆ ಹೋಗಲು ಅರ್ಧ ಕಿ.ಮೀ ಇರುತ್ತದೆ. ಹೈವೇ ಹಾಸನದಿಂದ ಬೇಲೂರಿಗೆ ಹೋಗುತ್ತದೆ.

ನಮ್ಮ ಭೂ ಸ್ವಾಧೀನವಾದ ಜಮೀನಿಗೆ ಸಂಬಂಧಪಟ್ಟಾಗೆ ನಕ್ಷೆಯನ್ನು ಹಾಜರುಪಡಿಸಿರುತ್ತೇನೆ. ನಕ್ಷೆಯನ್ನು ಹಾಜರುಪಡಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ವಡ್ಡರಹಳ್ಳಿಯಲ್ಲಿ ಜಮೀನುಗಳು ವ್ಯಾಪಾರವಾಗಿರುತ್ತದೆ. ಗ್ರಾಮಸ್ಥರನ್ನು ಕ್ರಯ ಪತ್ರವನ್ನು ಕೇಳಿ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಹಾಜರುಪಡಿಸಿದರೆ ನಿಜವಾದ ಬಂಡವಾಳ ಗೊತ್ತಾಗುತ್ತದೆ ಎಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಮ್ಮ ಹಳ್ಳಿಯಲ್ಲಿ ಬ್ಯಾಂಕ್ ಇರುವುದಿಲ್ಲ. ಜಮೀನಿನ ಮಧ್ಯ ಕಾಲುವೆ ಹೋಗುತ್ತದೆ. ಹಿಂದಿನ ನ್ಯಾಯಾಲಯದ ತೀರ್ಪನ್ನು ಬಿಟ್ಟು ನನ್ನ ಜಮೀನಿಗೆ ಸೂಕ್ತ ಬೆಲೆ ಇದೆ ಎಂದು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಹಗರೆ ಗ್ರಾಮದಿಂದ ನಮ್ಮ ಜಮೀನು 2 ಕಿಮೀ ಅಡಿ ದೂರದಲ್ಲಿ ಇರುತ್ತದೆ. ನಮ್ಮ ಅಕ್ಕಪಕ್ಕದ ಜಮೀನು ವ್ಯಾಪಾರವಾಗಿರುತ್ತದೆ. ಒಂದು ಗುಂಟೆಗೆ ಮೂರುವರೆ-ನಾಲ್ಕು ಲಕ್ಷಕ್ಕೆ ಮಾರಾಟವಾಗಿರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಕ್ರಯ ಪತ್ರ ಹಾಜರುಮಾಡಿರುತ್ತೇನೆ. ನನಗೆ ಹಿಂದೆ ಸೆಕ್ಷನ್ 4(1) ನೋಟೀಸ್ ಕೊಟ್ಟಿರುತ್ತಾರೆ. ಸೆಕ್ಷನ್ 4(1) ಸೆಕ್ಷನ್ 6(1) ನೋಟೀಸ್ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ನೋಟಿಫಿಕೇಶನ್ ಆಗುವ ಸಮಯದಲ್ಲಿ ನಾನು ತಕರಾರು ಮಾಡಿರುವುದಿಲ್ಲ, ಜಮೀನಿಗೆ ಇಷ್ಟು ಹಣ ಕೊಡಬೇಕೆಂದು ಕೇಳಿರುವುದಿಲ್ಲ ಎಂದರೆ ಸರಿಯಲ್ಲ.

ಡಿ.ಸಿ. ನಮ್ಮನ್ನು ಕರೆದು ಬೆಲೆ ನಿಗಧಿ ಮಾಡಿರುವುದಿಲ್ಲ. ಅವಾರ್ಡ್ ಆಗುವುದಕ್ಕಿಂತ ಮುಂಚಿತವಾಗಿ ಡಿ.ಸಿ ಯವರಿಗೆ ಹೆಚ್ಚಿನ ಹಣ ಬೇಕೆಂದು ಕೊಟ್ಟಿರುತ್ತೇನೆ ಹಾಗೂ ಕ್ರಯ ಪತ್ರವನ್ನು ಕೊಟ್ಟಿರುತ್ತೇನೆ. ನಾನು ಯಾವುದೇ ದಾಖಲಾತಿಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಡಿ.ಸಿ ಯವರು ಸಬ್ ರಿಜಿಸ್ಟ್ರಾರ್ ಕಚೇರಿಯಿಂದ ಬೆಲೆ ಮಾಹಿತಿಗಳನ್ನು ತರಿಸಿಕೊಂಡು ಆಯಾ ಆಯಾ ವರ್ಷಕ್ಕೆ ಅನುಕೂಲವಾಗಿ ಪರಿಹಾರವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿರುವ ಕ್ರಯ ಪತ್ರಗಳು ನನ್ನ ಜಮೀನಿಗೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಪಕ್ಕದ ಜಮೀನಿನ

ಕ್ರಯ ಪತ್ರವನ್ನು ಹಾಜರುಪಡಿಸದೇ ಯಾವುದೋ ಬೆಲೆ ಬಾಳುವ ಜಮೀನಿನ ಕ್ರಯ ಪತ್ರವನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಆಜುಬಾಜುವಿನ ಜಮೀನು ಕೂಡ ಭೂ ಸ್ವಾಧೀನವಾಗಿರುತ್ತದೆ.

ನಿಪಿ-7 ತೀರ್ಪು ರಸ್ತೆ ಪಕ್ಕ ಇರುವ ಜಮೀನಿಗೆ ಆಗಿರುವುದು ಅದನ್ನು ನಿಮಗೆ ಪರಿಗಣಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಕೋರಿ ಅರ್ಜಿಯನ್ನು ನಾನು ತಡವಾಗಿ ಸಲ್ಲಿಸಿದರಿಂದ ಈ ಅರ್ಜಿ ಊರ್ಜಿತವಲ್ಲ ಎಂದರೆ ಸರಿಯಲ್ಲ. ಎಲ್ ಎ ಓ ರವರು ನೀಡಿದ ಪರಿಹಾರ ಸೂಕ್ತ ಪರಿಹಾರವಾಗಿರುತ್ತದೆ ಎಂದರೆ ಸರಿಯಲ್ಲ.

ಪಾಟೀ ಸವಾಲು 1 ಮತ್ತು 4ನೇ ಪ್ರತಿವಾದಿ ಪರ ವಕೀಲರಿಂದಃ

ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ.,

ಅಪರ ಸೆಷನ್ಸ್ ಮತ್ತು ವಿಶೇಷ

ನ್ಯಾಯಾಧೀಶರು, ಹಾಸನ